

ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಗುಬ್ಬಿ ವೀರಣ್ಣ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ರಾಜ್‌ಕುಮಾರ್ ಜೊತೆ ಸರೋಜಾದೇವಿ ವೇದಿಕೆ ಹಂಚಿಕೊಂಡಿದ್ದರು. ಜೊತೆಗೆ ಎಸ್.ಎಂ. ಕೃಷ್ಣ ಹಾಗೂ ನಟಿ ಪಂಢರಿಬಾಯಿ ಸಹ ಇದ್ದರು.

### ಸಾಲಂಕೃತವಾಗಲಿ ಮಗಳು

ಕೊನೆಯ ಸಲ ಮಾತಾಡಿದ್ದು, ಭೇಟಿಯಾಗಿದ್ದು ಫೆಬ್ರುವರಿ ತಿಂಗಳಿನಲ್ಲಿ. ಮಗಳ ಮದುವೆ ಇದೆ ಎಂದಾಗ ಅದೆಷ್ಟು ಸಂಭ್ರಮಿಸಿದ್ದರು. ಧಾರೆ ಸೀರೆಯನ್ನು ಅವರೇ ಕೊಡಿಸಿದರು. ಕಾಂಜೀವರಂ ಸೀರೆಯನ್ನು ತರಿಸಿಕೊಟ್ಟರು. ಅವರ ಆಶೀರ್ವಾದ ಇರಲಿ ಎಂದು ಅದನ್ನೇ ನನ್ನ ಮಗಳು ಸೌಂದರ್ಯ ಉಟ್ಟುಕೊಂಡಳು. ಏನೆಲ್ಲ ಚಿನ್ನದೊಡವೆ ಮಾಡಿಸಿದೆ? ಖರೀದಿಯಾದ ಮೇಲೆ ಎಲ್ಲವನ್ನೂ ತೋರಿಸಬೇಕು ಎಂದು ತಾಕೀತು ಮಾಡಿದ್ದರು.

ಜಡೆಬಿಲ್ಲೆ, ಹೂಮೊಗ್ಗುಗಳಿಂದ ಆರಂಭಿಸಿ, ವಿನ್ಯಾಸದವರೆಗೂ ಉತ್ಸಾಹ ತೋರಿದ್ದರು. ಡಾಬು ಮಾಡಿಸಿದ್ದೀಯಾ ತಾನೆ ಎಂದು ವಿಚಾರಿಸಿದಾಗ ನಾನು ನಗುತ್ತಲೇ ಹೂಂ ಅಂದಿದ್ದೆ. ಅದೆಷ್ಟು ಮಾಡಿಸಿದೆ ಅಂದ್ರು.. ಒಂದು ಅಂದಾಗ, ಎಲ್ಲ ಸೀರೆಗೂ ಒಂದೊಂದು ಮಾಡಿಸಬೇಕಮ್ಮ. ಹೆಣ್ಮಕ್ಕಳಿಗೆ ಸಾಲಂಕೃತವಾಗಿ ಕಳುಹಿಸಿಕೊಡಬೇಕು. ಆಪದ್ಧನವಾಗಿ ಒಡವೆಗಳು ಜೊತೆಗಿರ್ತವೆ. ನಾವಿಲ್ಲದೇ ಇದ್ದರೂ ಅಪ್ಪ ಅಮ್ಮನ ಪ್ರೀತಿಯ ಪ್ರತೀಕವಾಗಿ ಅವಿರುತ್ತವೆ ಎಂದ ಮಾತು ಕಿವಿಯಲ್ಲಿ ಅನುರಣಿಸುತ್ತಿದೆ.

ಶ್ರೀ ಹರ್ಷ ಅವರು. ಅವರಿಬ್ಬರನ್ನು ನೋಡುವುದೇ ಕಣ್ಣಿಗೆ ಹಬ್ಬ ಆಗಿತ್ತು. ಕಣ್ಣಲ್ಲೇ ಮಾತಾಡೋರು, ಉಣಿಸೋದು, ತಿನಿಸೋದು, ಕಾಳಜಿ ಮಾಡೋದು ಇದನ್ನೆಲ್ಲ ಕಣ್ತುಂಬಿಕೊಳ್ಳುತ್ತ, ನಾನು ಹೋದ ವಿಚಾರವನ್ನೇ ಮರೆತಂತಾಗಿತ್ತು.

ಆಹ್ವಾನ ಪತ್ರಿಕೆಯಲ್ಲಿ ಯಾರಾದರೂ ಬಿ. ಸರೋಜಾದೇವಿ ಅಂತಷ್ಟೇ ಹಾಕಿದ್ರೆ ತರಾಟೆಗೆ ತೊಗೊಳ್ತಿದ್ರು. ನನ್ನ ಪೂರ್ಣ ಹೆಸರು ಬಿ. ಸರೋಜಾದೇವಿ ಶ್ರೀಹರ್ಷ ಎಂತಲೇ ಹಾಕಬೇಕು. ಒಂಟಿ ಹೆಸರು ಬೇಡ ಎಂದೇ ಹೇಳುತ್ತಿದ್ದರು. ಅಂಥ ಸಂಗಾತಿಯನ್ನು ಕಳೆದುಕೊಂಡಾಗ, ಒಳಗೊಳಗೇ ಕುಸಿದು ಹೋಗಿದ್ದರು. ಆದರೆ ಅವರಿಗೆ ಒಳಗಿನ ಸಂಘರ್ಷ, ಹೊರಗಿನ ಹೋರಾಟ ಎರಡನ್ನೂ ಮಾಡುವುದು ಸಿದ್ಧಿಸಿತ್ತು.

ಸಿನಿರಂಗದ ನಟಿಯರನ್ನು ಸುತ್ತಿಕೊಳ್ಳುವ ವಾದ ವಿವಾದಗಳಿಗೆ ಅವರು ಸದಾ ಕಾಳಜಿ ಮಾಡ್ತಿದ್ರು. ಅವಕಾಶವೇ ಕೊಡಬಾರದಮ್ಮ. ಜನ ಮಾತಾಡಿದ್ರೆ ಉದಾಸೀನ ಮಾಡಿ. ಉತ್ತರಿಸಲು, ಪ್ರತಿಕ್ರಿಯಿಸಲು ಹೋಗಬೇಡಿ ಎಂದೆಲ್ಲ ಹೇಳುತ್ತಿದ್ದರು. ಅವರು ಬೆನ್ನಿಗೆ ನಿಲ್ಲದೇ ಇದ್ದರೆ ನಮ್ಮಲ್ಲಿ ಆತ್ಮವಿಶ್ವಾಸ ಉಳೀತಿತ್ತೆ? ಕನಲಿ ಹೋದ ಸಂದರ್ಭಗಳಲ್ಲೆಲ್ಲ ಬೆನ್ನಿಗೆ ನಿಂತು ಮೈದಡವಿದವರು ಅವರು.

ಈ ಕಾಲಕ್ಕೆ ವ್ಯಾನಿಟಿ ವ್ಯಾನಿನಂಥ ಸೌಲಭ್ಯಗಳು ಬಂದಿವೆ. ನಮ್ಮ ಕಾಲದಲ್ಲಿ ಅಕ್ಕಪಕ್ಕದ ಮನೆಗಳೇ

